# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | (438) 387 |
| ಸದಸ್ಯರ ಹೆಸರು | ಶ್ರೀ ವಿಜಯಸಿಂಗ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 23.09.2020 |
| ಉತ್ತರಿಸುವ ಸಚಿವರು | ಕೃಷಿ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಸೋಯಾಬಿನ್ ಬೀಜಗಳು ಕಳಪೆ ಮಟ್ಟದಲ್ಲಿರುವುದರಿಂದ ರೈತರು ಸೋಯಾ ಬೀನ್ ಬೀಜಗಳ ಬಿತ್ತನೆಯನ್ನು ಹೊರತುಪಡಿಸಿ,ಉದ್ದು, ಹೆಸರು ಇನ್ನಿತರ ಬೀಜಗಳನ್ನು ಬಿತ್ತನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು, ಸೋಯಾ ಅವರೆ ಬದಲು ಕೆಲವು ರೈತರು ಮೆಕ್ಕೆಜೋಳ ಮತ್ತು ಇನ್ನಿತರೆ ಬೆಳೆಗಳನ್ನು ಬಿತ್ತನೆ ಮಾಡಿರುತ್ತಾರೆ. ಆದರೆ ಬೆಳಗಾವಿ ಜಿಲ್ಲೆಯಲ್ಲಿ ವಾಡಿಕೆಯಂತೆ ಸೋಯಾ ಬೀನ್ ಬೆಳೆಯನ್ನು ಮರು ಬಿತ್ತನೆ ಮಾಡಿರುತ್ತಾರೆ. |
| ಆ. | ಸೋಯಾ ಬೀನ್ ಬಿತ್ತನೆ ಬೀಜಗಳು ಕಳಪೆ ಮಟ್ಟದಲ್ಲಿದೆ ಎಂದು ಸರ್ಕಾರ ರೈತರಿಗೆ ಮಾಹಿತಿ ನೀಡಿದ್ದರೂ, ಕೃಷಿ ಅಧಿಕಾರಿಗಳು ತಾಲ್ಲೂಕು, ಗ್ರಾಮಗಳಿಗೆ ಹೋಗಿ ಸೋಯಾಬೀನ್ ಬಿತ್ತನೆ ಬೀಜಗಳನ್ನು ಸರಬರಾಜು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದರೆ ಮರು ಬಿತ್ತನೆಗೆ ಸರ್ಕಾರ ಕೈಗೊಂಡಕ್ರಮಗಳೇನು; | ಭಾರತ ಸರ್ಕಾರವು ಪ್ರಸ್ತುತ ವರ್ಷ ಸೋಯಾ ಅವರೆ ಬಿತ್ತನೆ ಬೀಜಗಳ ಮೊಳಕೆ ಪ್ರಮಾಣ ಕಡಿಮೆ ಇರುವ ಪ್ರಯುಕ್ತ ನಿಗದಿತ ಮೊಳಕೆ ಪ್ರಮಾಣವನ್ನು ಮೊದಲು ಶೇ. 70ರಿಂದ 65ಕ್ಕೆ ನಂತರ ಶೇ.65 ರಿಂದ 60ಕ್ಕೆ ಇಳಿಸಿದ್ದರೂ ಸಹ ರೈತರು ವಾಡಿಕೆಯಂತೆ ಸ್ವಇಚ್ಚೆಯಿಂದ ಸೋಯಾ ಅವರೆ ಬಿತ್ತನೆ ಬೀಜಗಳನ್ನು ಖರೀದಿಸಿ ಬಿತ್ತನೆ ಮಾಡಿರುತ್ತಾರೆ. ಆದಾಗ್ಯೂ ಸೋಯಾ ಅವರೆ ಮೊಳಕೆ ಸಮಸ್ಯೆಯಿಂದ ಮರು ಬಿತ್ತನೆ ಮಾಡಲು ಇಚ್ಛಿಸಿದ ರೈತರಿಗೆ ಬೀಜ ವಿತರಣೆಗೆ ಕ್ರಮ ಕೈಗೊಳ್ಳಲಾಗಿರುತ್ತದೆ. |
| ಇ | ಕೃಷಿ ಅಧಿಕಾರಿಗಳು ಹಂಚಿಕೆ ಮಾಡಿರುವ ಸೋಯಾಬೀನ್ ಬಿತ್ತನೆ ಬೀಜಗಳು ಕಳಪೆ ಮಟ್ಟದಿಂದ ಕೂಡಿದ್ದು, ಬಿತ್ತನೆ ಮಾಡಿದ ಬೀಜಗಳು ಮೊಳಕೆ ಬಾರದ ಕಾರಣ, ರೈತರು ಮರು ಬಿತ್ತನೆ ಮಾಡಿ, ರೈತರಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಅಂತಹ ಕೃಷಿ ಅಧಿಕಾರಿಗಳ ವಿರುದ್ಧ ಯಾವ ಕ್ರ ಮ ಕೈಗೊಳ್ಳಲಾಗಿದೆ? | ಬಿತ್ತನೆ ಮಾಡಿದ ಸೋಯಾ ಅವರೆ ಬಿತ್ತನೆ ಬೀಜಗಳು ಮೊಳಕೆ ಬಾರದೆ ರೈತರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದ್ದರಿಂದ ಮೊಳಕೆ ಪ್ರಮಾಣ ಕಡಿಮೆ ಇರುವ ಪ್ರಯುಕ್ತ ಸೋಯಾ ಅವರೆ ಬಿತ್ತನೆ ಬೀಜ ಪೂರೈಸಿದ ಸಂಸ್ಥೆಗಳ ವಿರುದ್ಧ ಸಂಬಂಧಪಟ್ಟ ಕೃಷಿ ಅಧಿಕಾರಿಗಳು ಬೀಜ ಕಾಯ್ದೆ ಅನುಸಾರ ಸೂಕ್ತ ಕ್ರಮ ಜರುಗಿಸಲು ಕ್ರಮ ವಹಿಸಿರುತ್ತಾರೆ. |

**ಸಂಖ್ಯೆ: AGRI-ACT/167/ 2020**

(ಬಿ.ಸಿ. ಪಾಟೀಲ)
ಕೃಷಿ ಸಚಿವರು